ಕಥೆ

# ಗೊದ್ಲೆಯ ಕನಸು




**ಜೆ.ಆರ್. ರವಿಕುಮಾರ್**

ಕಲೆ: ವೆಂಕಟ್ರಮಣ ಭಟ್


ಸೂರ್ಯ ಮೂಡುವ ಹೊತ್ತು. ಜಗತ್ತು ಕತ್ತಲೆಯ ಬಂಧನದಿಂದ ಬಿಡಿಸಿಕೊಳ್ಳಲು ತವಕಿಸುತ್ತಿತ್ತು. ಮರ, ಗಿಡ, ಎಲೆಗಳ ಮರೆಯಿಂದ ಹಕ್ಕಿಗಳು ಚಿಲಿಪಿಲಿಗುಡುತ್ತ, ಊರಿನ ಆ ಮೂಲೆ, ಈ ಮೂಲೆಯಿಂದ ಕೊಕ್ಕೊಕ್ಕೋ... ಎಂದು ಹುಂಜಗಳು ಕೂಗುತ್ತ ಬೆಳಕಿನಾಗಮನವನ್ನು ಸಂಭ್ರಮಿಸತೊಡಗಿದವು.

ಈ ಹೊತ್ತಿನಲ್ಲಿ ಹೊಲ್ಗೇರಿಯ ಮುಳ್ಕಟ್ಟ ಮಗ್ಗುಲು ಬದಲಿಸಿ ನೋಡಿದ. ಹುಲ್ಲು ಹೊದೆಸಿದ್ದ ಗುಡಿಸಲ ಮೇಲ್ಛಾವಣಿಯ ಕಿಂಡಿಯಿಂದ ಒಳ ಬಂದಿದ್ದ ಬೆಳದಿಂಗಳ ಕಿರಣವೊಂದು, ಅವನ ಮಗ ಮಲಗುತ್ತಿದ್ದ ಕೌದಿಯ ಮೇಲೆ ಬಿದ್ದಿತ್ತು. ಆದರೆ ಅವನು ಅಲ್ಲಿರಲಿಲ್ಲ. ರಾತ್ರಿಯಿಡೀ ಗೌಡರ ಹೊಲದಲ್ಲಿ ಮಾಡಿದ ಗೇಯ್ಮೆಯಿಂದ ಭಂಗವಾಗದ ನಿದ್ರೆ ಮಾಡಿ ಪ್ರಶಾಂತವಾಗಿದ್ದ ಮುಳ್ಕಟ್ಟನ ಮನಸ್ಸು ರಾಡಿಯಾಯಿತು.

'ಥುತ್ತೆರಿಕೆ, ಇವುಂದು ದಿನಾ ಇದೇ ಆಗೋಯ್ತು. ಎಷ್ಟೇಳಾದು? ಸದ್ದು ಮಾಡ್ದಂಗೆ ಎದ್ದೋಗಿರ್ತಾನೆ. ಇವ್ನಿಗೆ ಯೋನಾಗ್ಯೆತೆ?' ಎಂದು ಮನಸ್ಸಲ್ಲೇ ಬೈದುಕೊಳ್ಳುತ್ತ, ಮೇಲೆದ್ದು ತಡಿಕೆ ಸರಿಸಿ ಹೊರಬಂದು ಮತ್ತದನು ಸ್ವಸ್ಥಾನದಲ್ಲಿರಿಸಿ ಕೆರೆಯ ಕಡೆ ಹೊರಟ.

ಈ ವಾರದ ಮೊದಲನೆ ದಿನ ಹೀಗೇ ಅವನು ನಸುಕಿನಲ್ಲೇ ಎದ್ದು ಹೊರ ಹೋಗಿದ್ದಾಗ ಭಯದಿಂದ ಮುಳ್ಕಟ್ಟ ಕತ್ತಲೆ ತುಂಬಿದ ಊರ ಬೀದಿ, ಓಣಿಗಳಲ್ಲಿ ಹುಡುಕುತ್ತಿದ್ದಾಗ ಅವನನ್ನು ಕೆರೆ ಕಡಿಕೆ ಹೋಗಿ

